ದಿಃ **12-10-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **19** ನೇ ಪ್ರತಿವಾದಿ ಪರ ಶ್ರೀ ಜಿ. ಎಸ್. ಎಂ. ವಕೀಲರಿಂದಃ

ದಾವಾ ಬ ತಪಶೀಲಿನ 2 ನೇ ಆಸ್ತಿಯನ್ನು ಹೊರತುಪಡಿಸಿ ಉಳಿದ ಆಸ್ತಿಗಳು ನಮ್ಮ ಮತ್ತು 17 ನೇ ಪ್ರತಿವಾದಿಗಳ ಮನೆತನದ ಪಿತ್ರಾರ್ಜಿತ ಆಸ್ತಿಗಳು ಎನ್ನುವುದು ನಿಜ. ಈ ಆಸ್ತಿಗಳ ಕುರಿತು ನಮ್ಮ ಮನೆತನದ ಪೂರ್ವಜರು ಹ 1973 ರ ಪೂರ್ವದಲ್ಲಿ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅದರ ಮೊದಲೇ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಹಿಸ್ಸೆಯ ಪ್ರಕಾರ ಅವರವರು ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ 2-3 ಭಾರಿ ಆಸ್ತಿಯನ್ನು ಬದಲಾವಣೆ ಮಾಡಿಕೊಂಡು ಬಂದಿರುತ್ತಾರೆ ಎಂದು ಹೇಳುತ್ತಾರೆ. ಆ ರೀತಿ ಬದಲಾವಣೆ ಪ್ರಕಾರ ಆಸ್ತಿಗಳನ್ನು ವಹಿವಾಟು ಮಾಡುತ್ತಾ ಬಂದು ಪೋತಿ ಆಗಿರುತ್ತಾರೆ ಎನ್ನುವುದು ನಿಜ. ಪೋತಿ

ಆದ ನಂತರ ಅವರವರ ವಾರಸುದಾರರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತವೆ ಎಂದರೆ ಸಾಕ್ಷಿ ಕೆಲವೊಂದು ಆಗಿರುತ್ತವೆ ಕೆಲವೊಂದು ಆಗಿರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಬ 1 ನೇ ಆಸ್ತಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳ ಖಾತೆ ಬದಲಾವಣೆ ಆಗಿರುತ್ತವೆ. ಅವು ಯಾರ ಹೆಸರಿಗೆ ಖಾತೆ ಬದಲಾವಣೆ ಆಗಿವೆಯೋ ಅವರೇ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎನ್ನುವುದು ನಿಜ. 2 ನೇ ಪ್ರತಿವಾದಿಯು ಮೂಲ ಪುರಷನ ಘರಾಣೆಕ್ಕೆ ಸಂಬಂಧಪಟ್ಟ ಅಜ್ಜಪ್ಪನ ವಾರಸುದಾರರಲ್ಲಿ ಒಬ್ಬ ಎನ್ನುವುದು ನಿಜ. 2 ನೇ ಪ್ರತಿವಾದಿಯು ಕೆ. ಎಂ. ಎಫ್. ನಲ್ಲಿ ಅವನು ಮದುವೆ ಆಗುವ ಪೂರ್ವದಿಂದಲೇ ನೌಕರಿ ಮಾಡುತ್ತಿದ್ದ ಎನ್ನುವುದು ನಿಜ. 2 ನೇ ಪ್ರತಿವಾದಿ ಮದುವೆ ಆಗುವ ಪೂರ್ವದಲ್ಲಿ, ಮದುವೆಯಾದ ನಂತರ ಹಾಗೂ ಈಗಲೂ ಸಹ ಹೆಂಡತಿ ಮಕ್ಕಳೊಂದಿಗೆ ಧಾರವಾಡದಲ್ಲಿ ವಾಸವಿರುತ್ತಾನೆ ಎನ್ನುವುದು ನಿಜ. 2 ನೇ ಪ್ರತಿವಾದಿಗೆ ಸಾಕಷ್ಟು ಸಂಬಳ ಇತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನೌಕರಿಗೆ ಸೇರಿಕೊಂಡು ತಿಂಗಳಿಗೆ 3000 ರೂ. ಸಂಬಳ ಇತ್ತು. 2 ನೇ ಪ್ರತಿವಾದಿ ತನ್ನ 28-30 ವರ್ಷದವನು ಇದ್ದಾಗ ನೌಕರಿಗೆ ಸೇರಿಕೊಂಡ. 2 ನೇ ಪ್ರತಿವಾದಿ 2000 ನೇ ಮೊದಲೇ ನಿವೃತ್ತಿ ಹೊಂದಿರುತ್ತಾನೆ. ಅವನು ನಿವೃತ್ತನಾಗುವ ಸಂಬಳ ಎಷ್ಟು ಇತ್ತು ಎಂದು ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಗೆ ಮೂರು ಜನ ಗಂಡು ಮಕ್ಕಳು ಇದ್ದರು, ಅದರಲ್ಲಿ ಒಬ್ಬನು ಮೃತಪಟ್ಟಿರುತ್ತಾನೆ. 2 ನೇ ಪ್ರತಿವಾದಿ ಮಕ್ಕಳು ಓದಿರುತ್ತಾರೆ, ಆದರೆ ನೌಕರಿ ಮಾಡುತ್ತಾರೆ ಅಥವಾ ಇಲ್ಲವೆಂದು ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿ ಹೆಂಡತಿ ಮನೆಯಲ್ಲಿ ಇರುತ್ತಾಳೆ. ದಾವಾ ಬ ತಪಶೀಲಿನ 2 ನೇ ಆಸ್ತಿಯು ಮೂಲತಃ ಮಹಾದೇವಪ್ಪ ತಂದೆ ಗಡ್ಲಪ್ಪ ಮೊಗಲಿ ಇವರಿಗೆ ಸೇರಿದ್ದು ಎನ್ನುವುದು ನಿಜ. 2 ನೇ ಪ್ರತಿವಾದಿ 1992 ರಲ್ಲಿ ಇನ್ನೂ ನೌಕರಿಯನ್ನು ಮಾಡುತ್ತಿದ್ದ ಎನ್ನುವುದು ನೆನಪಿರುವುದಿಲ್ಲ. 2 ನೇ ಪ್ರತಿವಾದಿ ಕುಟುಂಬದ ಆರ್ಥಿಕ ಸ್ಥಿತಿಗತಿಯ ಬಗ್ಗೆ ಮಾಹಿತಿ ಇರುವುದಿಲ್ಲ. 2 ನೇ ಪ್ರತಿವಾದಿ ಮಕ್ಕಳಿಗೆ 30 ವರ್ಷ ವಯಸ್ಸು ಇರಬಹುದು. ಅವರು ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿ ಮಕ್ಕಳ ವಿದ್ಯಾಭ್ಯಾಸ ಹಾಗೂ ಮನೆ ಬಾಡಿಗೆಗೆ ಅವನಿಗೆ ಬರುವ ಸಂಬಳ ಸಾಕಾಗುತ್ತಿತ್ತು. 2 ನೇ ಪ್ರತಿವಾದಿಗೆ ಎಷ್ಟುಸಂಬಳ ಇತ್ತು, ಎಷ್ಟು ಖರ್ಚಾಗಿ ಎಷ್ಟು ಉಳಿಯಿತ್ತಿತ್ತು ಎಂದು ಮಾಹಿತಿ ಇರುವುದಿಲ್ಲ. ದಾವಾ ಬ ತಪಶೀಲಿನ 2 ನೇ ಆಸ್ತಿಯನ್ನು 1992 ರಲ್ಲಿ 2 ನೇ ಪ್ರತಿವಾದಿಯು ಮಹದೇವಪ್ಪ ಗಡ್ಲಪ್ಪ ಮೊಗಲಿ ಇವರಿಂದ ಖರೀದಿಸಿದ್ದ ಎನ್ನುವುದು ನಿಜ. ಸದರಿ ಖರೀದಿ ಪತ್ರದ ಪ್ರಕಾರ ಅವನ ಹೆಸರಿಗೆ ಖಾತೆ ಬದಲಾವಣೆಯಾಗಿ ಕಬ್ಜಾ ವಹಿವಾಟಿಯಲ್ಲಿ ಇತ್ತು ಎನ್ನುವುದು ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯ ಅಂಗವಿಕಲ ಮಗ ಮೃತಪಟ್ಟು 30-40 ವರ್ಷವಾಗಿರುತ್ತದೆ. ಅವನು ಮೃತಪಟ್ಟಾಗ ಅವನಿಗೆ 18-20 ವರ್ಷ ವಯಸ್ಸು ಇತ್ತು. ಅವನು ದಾವಾ ಬ ತಪಶೀಲಿನ 2 ನೇ ಆಸ್ತಿಯನ್ನು 2 ನೇ ಪ್ರತಿವಾದಿ ಖರೀದಿಸುವ ಪೂರ್ವದಲ್ಲಿ ಮೃತಪಟ್ಟಿದ್ದ ಎನ್ನುವುದು ನಿಜ.

2 ನೇ ಪ್ರತಿವಾದಿ ತನ್ನ ನೌಕರಿಯ ಉಳಿತಾಯದ ಹಣದಿಂದ ಸದರಿ ಆಸ್ತಿಯನ್ನು ಖರೀದಿಸಿದ್ದ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಾಗೂ ಅವರ ತಂದೆ ಕೆಲವೊಂದು ಪಿತ್ರಾರ್ಜಿತ ಆಸ್ತಿಯನ್ನ ಮಾರಾಟ ಮಾಡಿ ಅವುಗಳಿಂದ ಈ ಆಸ್ತಿಯನ್ನು ಖರೀದಿ ಮಾಡಿರುತ್ತಾನೆ. ಸರ್ವೆ ನಂಃ 142 ರಲ್ಲಿ 12 ಎಕರೆ 30 ಗುಂಟೆಯನ್ನು 3 ಜನರಿಗೆ ಮಾರಾಟ ಮಾಡಿರುತ್ತಾನೆ. ಸರ್ವೇ ನಂಃ 157 ರುದ್ರಪ್ಪ ಜೋಗೊಂಡರ ಇವರಿಗೆ ಖರೀದಿ ಕೊಟ್ಟಿರುತ್ತಾರೆ. ಈ ಎರಡು ಆಸ್ತಿಗಳು ನಮ್ಮ ಘರಾಣೆದ ಪಿತ್ರಾರ್ಜಿತ ಆಸ್ತಿಗಳು. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇವು. ಸದರಿ ಸರ್ವೆ ನಂಬರುಗಳ ಆಸ್ತಿಗಳು ವಾದಪತ್ರದ ತಪಶೀಲಿನಲ್ಲಿ ಇಲ್ಲ ಎನ್ನುವುದು ನಿಜ . ಸದರಿ ಆಸ್ತಿಗಳು ನಮ್ಮ ಘರಾಣಕ್ಕೆ ಸಂಬಂಧಪಡದ ಆಸ್ತಿಗಳು ಆಗಿದ್ದರಿಂದ ಈ ದಾವೆಯಲ್ಲಿ ಸೇರ್ಪಡೆಗೊಳಿಸಿಲ್ಲ ಎಂದರೆ ಸಾಕ್ಷಿ ನಮ್ಮ ವಹಿವಾಟಿಯಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಗಳು 2 ನೇ ಪ್ರತಿವಾದಿ ಹಾಗೂ ಅವನ ತಂದೆಯ ಹೆಸರು ಇದ್ದ ದಾಖಲೆಗಳನ್ನು ಹಾಜರು ಪಡಿಸಿರುತ್ತದೆ. ಆ ಕುರಿತು ಡ ನಂಬರಃ 309, 524, 777, 887 ಹಾಜರು ಪಡಿಸಿರುತ್ತೇವೆ. 2 ನೇ ಪ್ರತಿವಾದಿ ತಂದೆಗೆ 4 ಜನ ಮಕ್ಕಳು. ಅವರಲ್ಲಿ 2 ನೇ ಪ್ರತಿವಾದಿ 2 ನೇ ಮಗ ಇರುತ್ತಾನೆ. 2 ನೇ ಪ್ರತಿವಾದಿಗೆ 3 ಜನ ಸಹೋದರರು ಹಾಗೂ ಒಬ್ಬ ಸಹೋದರಿ ಇರುತ್ತಾಳೆ. ಅವರಲ್ಲಿ ದೊಡ್ಡವನು ಮಲ್ಲೇಶಪ್ಪ ಬಣಕಾರ. 2 ನೇ ಪ್ರತಿವಾದಿ ಧಾರವಾಡದ ಕೆ. ಎಂ. ಸಿ. ಯಲ್ಲಿ ನೌಕರಿಯನ್ನು ಮಾಡುತ್ತಾ ಅಲ್ಲೆ ಇದ್ದಾಗ ಅವನ ಉಳಿದ ಸಹೋದರರು ಮತ್ತು ತಂದೆ ಅವರ ಆಸ್ತಿಗಳನ್ನು ವಹಿವಾಟು ಮಾಡುತ್ತಿದ್ದು, ಅವನು ಭಾಗವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಊರಿಗೆ ಮೊದಲು 6 ತಿಂಗಳಿಗೆ ಒಂದು ಭಾರಿ ಬರುತ್ತಿದ್ದ, ನಂತರ 3 ತಿಂಗಳಿಗೆ ಒಂದು ಭಾರಿ ಬರುತ್ತಿದ್ದ. ದಾವಾ ತಪಶೀಲಿನ ಬ 2 ನೇ ಆಸ್ತಿಯು 2 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಆಗಿರುತ್ತದೆ ಎನ್ನುವುದು ನಿಜ. ಸದರಿ ಖರೀದಿ ಪತ್ರ ನಾನು ನೋಡಿರುತ್ತೇನೆ ಸದರಿ ಖರೀದಿ ಪತ್ರದಲ್ಲಿ ಸರ್ವೆ ನಂಃ 157 ಹಾಗೂ 142 ನ್ನು ಮಾರಾಟ ಮಾಡಿ ಬಂದ ಹಣದಿಂದ ಖರೀದಿ ಮಾಡಿರುತ್ತದೆ ಎಂದು ಬರೆದಿಲ್ಲ. ಸದರಿ ವಿಷಯವನ್ನು 2 ನೇ ಪ್ರತಿವಾದಿ ನೌಕರಿ ಮಾಡಿ ಬಂದ ಆದಾಯದಿಂದ ಆಸ್ತಿಯನ್ನು ಖರೀದಿಸಿದ್ದರಿಂದ ಬರೆದಿಲ್ಲ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಕಾರಣದಿಂದ ಅದು ಅವನ ಸ್ವಯಾರ್ಜಿತವಾದ ಆಸ್ತಿ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತನ್ನ ನೌಕರಿಯಿಂದ ನಿವೃತ್ತಿ ಆದಾಗಿನಿಂದ ಪದೇ ಪದೇ ಊರಿಗೆ ಬರುತ್ತಿರಲಿಲ್ಲ ಎನ್ನುವುದು ನಿಜ. ಹಾಗಾಗಿ ಸದರಿ ಆಸ್ತಿಯನ್ನು ಉಳುಮೆ ಮಾಡಲು 2 ನೇ ಪ್ರತಿವಾದಿಗೆ ಆಗುತ್ತಿರಲಿಲ್ಲ ಎಂದರೆ ಸಾಕ್ಷಿ ಅವರ ತಮ್ಮಂದಿರಿಂದ ಮಾಡಿಸುತ್ತಿದ್ದ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ತನ್ನ ನೌಕರಿಯಿಂದ ನಿವೃತ್ತಿ ಆದಾಗಿನಿಂದ ಅವನ ಸಂಬಳದಲ್ಲಿ ಅರ್ಧ ಸಂಬಳ ಬರುತ್ತಿದೆ ಎನ್ನುವುದು ಗೊತ್ತಿರುವುದಿಲ್ಲ. ಹಾಗಾಗಿ ಧಾರವಾಡದಲ್ಲಿ ಜೀವನ ಸಾಗಿಸಲು ಗೃಹಕೃತ್ಯ ಅಡಚಣೆ

ಉಂಟಾಯಿತು ಎನ್ನುವುದು ಗೊತ್ತಿರುವುದಿಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ಊರಿನಲ್ಲಿ ಪ್ರಚಾರ ಮಾಡಿದ್ದ ಎಂದರೆ ಸರಿಯಲ್ಲ. ಸದರಿ ವಿಷಯ 19 ನೇ ಪ್ರತಿವಾದಿಗೆ ಗೊತ್ತಾಯಿತು ಎನ್ನುವುದು ಗೊತ್ತಿರುವುದಿಲ್ಲ. 19 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಕಷ್ಟಗಳನ್ನು ಅರಿತು ಖರೀದಿಗೆ ತೆಗೆದುಕೊಳ್ಳಲು ನಿರ್ದರಿಸಿದ್ದ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಜಮೀನು 3,28,000/- ರೂ.ಗಳಿಗೆ ಖರೀದಿ ಮಾತುಕತೆ ಆಗಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಅದರಂತೆ 3,28,000/- ರೂ. ಗಳನ್ನು 2 ನೇ ಪ್ರತಿವಾದಿಗೆ ಕೊಟ್ಟು 19 ನೇ ಪ್ರತಿವಾದಿ ತನ್ನ ಹೆಸರಿಗೆ ನೋಂದಣಿ ಮಾಡಿಸಿ ಕೊಂಡಿರುತ್ತಾನೆ ಎನ್ನುವುದು ನಿಜ. ಆ ಖರೀದಿ ಪ್ರಕಾರ ಸದರಿ ಆಸ್ತಿಯು 19 ನೇ ಪ್ರತಿವಾದಿಯ ಕಬ್ಜಾ ವಹಿವಾಟಿಯಲ್ಲಿದ್ದು, ಅವನ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎನ್ನುವುದು ನಿಜ. 19 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಕಷ್ಟ ಸುಖಗಳನ್ನು ಅರಿತು ಖರೀದಿಮಾಡಿದ್ದರಿಂದ ಅವನು ಮೌಲ್ಯಾಧಾರಿತ ಹಾಗೂ ಪ್ರಮಾಣಿಕ ಖರೀದಿದಾರ ಇರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಆಸ್ತಿ ನಮ್ಮ ಘರಾಣೆಗೆ ಸಂಬಂಧ ಪಡದ ಆಸ್ತಿ ಆಗಿದ್ದರಿಂದ ಅದರಲ್ಲಿ ನಮಗೆ ಮತ್ತು 1, 3 ರಿಂದ 18 ನೇ ಪ್ರತಿವಾದಿಗಳಿಗೆ ಯಾವುದೇ ಹಿಸ್ಸೆಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಇರುವುದರಿಂದ ಅವನು ಮಾರಾಟ ಮಾಡಿರುವುದನ್ನು ಪ್ರಶ್ನಿಸುವ ಅಧಿಕಾರ ನಮಗೆ ಇಲ್ಲ ಎಂದರೆ ಸರಿಯಲ್ಲ.

*ಪಾಟೀ ಸವಾಲುಃ* 16 ನೇ ಪ್ರತಿವಾದಿ ಪರಃ 16 ನೇ ಪ್ರತಿವಾದಿ ಹಾಗೂ ಅವರ ವಕೀಲರು ಗೈರು ಹಾಜರಿದ್ದ ಕಾರಣ ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 12-10-2023

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ, ಹಿರೇಕೆರೂರು